

ಟ್ರೋಫಿ ಅಪ್ಪಿಕೊಂಡ ಕೃಣಾಲ್ ಪಾಂಡೆ ಖುಷಿ

ಅನುಭವಿಸಿತ್ತು. ಇದಾದ ಬಳಿಕ ಆರ್‌ಸಿಬಿ ಫೈನಲ್ ಪ್ರವೇಶಿಸಲಿಲ್ಲ. 18ನೇ ಆವೃತ್ತಿಯಲ್ಲಿ ಯುವ ಆಟಗಾರ ರಜತ್ ಪಾಟೀದಾರ್ ನಾಯಕತ್ವದಲ್ಲಿ ಚಾಂಪಿಯನ್ ಆಗಿದ್ದು ಈಗ ದಾಖಲೆ.

ಆರ್‌ಸಿಬಿ ತಂಡ ಲೀಗ್ ಹಂತದಿಂದ ಪ್ರಶಸ್ತಿ ಗೆಲ್ಲುವ ತನಕ ಸಾಗಿದ ರಾಜಮಾರ್ಗದಲ್ಲಿ ಪಡೆದ ಗೆಲುವುಗಳು ಕೂಡ ತಂಡಕ್ಕೆ ಹುಮ್ಮಸ್ಸು ತುಂಬಿದವು. 2019ರ ನಂತರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಈಡನ್ ಗಾರ್ಡನ್‌ನಲ್ಲಿ ಮೊದಲ ಗೆಲುವು, 2008ರ ನಂತರ ಚೆನ್ನೈನಲ್ಲಿ ಸೂಪರ್ ಕಿಂಗ್ಸ್ ವಿರುದ್ಧ ಜಯ, 2015ರ ನಂತರ ವಾಂಖೆಡೆ ಕ್ರೀಡಾಂಗಣದಲ್ಲಿ ಮುಂಬೈ ಇಂಡಿಯನ್ಸ್ ಎದುರು ಗೆಲುವು, ಐಪಿಎಲ್ ಇತಿಹಾಸದಲ್ಲಿ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಲೀಗ್‌ನ ಎರಡೂ ಪಂದ್ಯಗಳಲ್ಲಿ ಗೆಲುವು ಪಡೆದ ದಾಖಲೆ, ಪ್ರಸಕ್ತ ಟೂರ್ನಿಯಲ್ಲಿ ಪಂದ್ಯ ಶ್ರೇಷ್ಠ ಗೌರವ ಪಡೆದ ಒಂಬತ್ತು ವಿಭಿನ್ನ ಆಟಗಾರರು... ಹೀಗೆ ಅನೇಕ ವಿಶಿಷ್ಟ ದಾಖಲೆಗಳ ಹೂರಣವನ್ನೂ ಆರ್‌ಸಿಬಿ ತನ್ನದಾಗಿಸಿಕೊಂಡಿತು.

ಐಪಿಎಲ್‌ನಲ್ಲಿ ಅತ್ಯಧಿಕ ಅರ್ಧಶತಕಗಳ (63) ದಾಖಲೆಯನ್ನೂ ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡರು. ಡೇವಿಡ್ ವಾರ್ನರ್ (62) ಮತ್ತು ಶಿಖರ್ ಧವನ್ (51) ನಂತರದ ಸ್ಥಾನಗಳನ್ನು ಹೊಂದಿದ್ದಾರೆ. ಇಷ್ಟು ವರ್ಷಗಳ ಕಾಲ ಟೂರ್ನಿ ಆರಂಭಕ್ಕೂ ಮೊದಲು 'ಈ ಸಲ ಕಪ್ ನಮ್ದೇ' ಎಂದು ಭರವಸೆಯಿಂದ ಬೀಗುತ್ತಿದ್ದ ಆಟಗಾರರು ಹಾಗೂ ಅಭಿಮಾನಿಗಳು ಈಗ ಹೆಮ್ಮೆಯಿಂದ 'ಈ ಸಲ ಕಪ್ ನಮ್ದು' ಎಂದು ಸಂಭ್ರಮ ಪಡುತ್ತಿದ್ದಾರೆ. ಐಪಿಎಲ್ ಮಾದರಿಯಲ್ಲಿ ನಡೆಯುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯಲ್ಲಿ ಕಳೆದ ವರ್ಷ ಬೆಂಗಳೂರಿನ ತಂಡದ ವನಿತೆಯರು ಚಾಂಪಿಯನ್ ಆಗಿದ್ದರು. ಪುರುಷರ ತಂಡದವರು 17 ಆವೃತ್ತಿಗಳಲ್ಲಿ ಸೋತಿದ್ದರು. ಆಗ ಮಹಿಳೆಯರೇ ಟ್ರೋಫಿ ಗೆದ್ದರು, ಪುರುಷರ ತಂಡ ಗೆಲ್ಲೋದು ಯಾವಾಗ? ಈ ಸಲ ಕಪ್ ನಮ್ದೇನಾ? ಎಂದು ಕೋಟ್ಯಂತರ ಅಭಿಮಾನಿಗಳು ವ್ಯಂಗ್ಯವಾಗಿ ಕೇಳಿದ್ದರು. ಅವರೆಲ್ಲರ ಏಕೈಕ ಪ್ರಶ್ನೆಗೆ ಗುಜರಾತ್‌ನ ಅಹಮದಾಬಾದ್‌ನ ಕ್ರೀಡಾಂಗಣದಲ್ಲಿ ಕಂಡುಬಂದ ಆರ್‌ಬಿಸಿ ಆಟಗಾರರ ಸಂಘಟಿತ ಪ್ರದರ್ಶನ ಉತ್ತರದಂತಿದೆ.

ಪ್ರತಿಕ್ರಿಯಿಸಿ: feedback@sudha.co.in

